KATK010056102023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ ಸಂ.125/2023**

ಪ್ರಾ.ಸಾ. ಃ **1**

ದೋ.ಸಾ. ಃ **3**

ದಿ**.02.08.2024**

ಹೆಸರು ಃ ನಾಗರಾಜಾಚಾರ್

ತಂದೆಯ ಹೆಸರು ಃ ಶ್ರೀಕಂಠಾಚಾರ್

ವಯಸ್ಸು ಃ **45** ವರ್ಷ

ಉದ್ಯೋಗ ಃ ಕಾರ್ಪೆಂಟರ್

ವಾಸಸ್ಥಳ ಃ ಕರೇಶಾಣಯ್ಯನಪಾಳ್ಯ

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ನಾನು ಕಾರ್ಪೆಂಟರ್ ಆಗಿ ಕೆಲಸ ಮಾಡುತ್ತೇನೆ. ಚಾ.ಸಾ.**4** ಧನಲಕ್ಷ್ಮಿ ನನ್ನ ಹೆಂಡತಿ. ನನಗೆ ಚಾ.ಸಾ.**1** ಶಿವಸ್ವಾಮಿ ಅಲಿಯಾಸ್ ಸ್ವಾಮಿ ಮತ್ತು ಮೃತ ಪಾಂಡುರಂಗ ಅಲಿಯಾಸ್ ಗಿರೀಶ್ ಗೊತ್ತಿದೆ. ಅವರು ನನ್ನ ಜೊತೆಗೆ ಕಾರ್ಪೆಂಟರ್ ಕೆಲಸ ಮಾಡುತ್ತಿದ್ದರು. ನನಗೆ ವಿಸಿಯಲ್ಲಿ ಕಾಣುತ್ತಿರುವ ವ್ಯಕ್ತಿ ಗೊತ್ತಿದೆ. ಅವನ ಹೆಸರು ಅರುಣ. ಆರೋಪಿ ಕೂಡಾ ನನ್ನ ಜೊತೆಗೆ ಕಾರ್ಪೆಂಟರ್ ಕೆಲಸ ಮಾಡುತ್ತಿದ್ದನು. ಆರೋಪಿ ಅರುಣ ನಮ್ಮ ಅಂಗಡಿಯಲ್ಲಿ ಮಲಗುತ್ತಿದ್ದನು. ನನ್ನ ಅಂಗಡಿಯ ಹೆಸರು ತಾಂಡವೇಶ್ವರ ವುಡ್ ವರ್ಕ್. ಅದು ಹೆಬ್ಬೂರಿನ ಬನ್ನಿಮರದ ಕಟ್ಟೆಯಲ್ಲಿದೆ. ನನಗೆ ಚಾ.ಸಾ.**2** ರೇಣುಕಾ ಗೊತ್ತಿದೆ.
2. ದಿ**.19.03.2023** ರಂದು ರಾತ್ರಿ **11.00** ಗಂಟೆಗೆ ಚಾ.ಸಾ.**2** ರೇಣುಕಾ ನನಗೆ ಫೋನ್ ಮಾಡಿ ನನ್ನ ಅಂಗಡಿಯಲ್ಲಿ ಗಲಾಟೆ ನಡೆಯುತ್ತಿದೆ, ಅರುಣ ಗಿರೀಶ್ ಮತ್ತು ಸ್ವಾಮಿಗೆ ಹೊಡೆಯುತ್ತಿದ್ದಾನೆ ಎಂದು ಹೇಳಿದರು. ನಾನು ಮತ್ತು ನನ್ನ ಹೆಂಡತಿ ಚಾ.ಸಾ.**4** ಧನಲಕ್ಷ್ಮಿ

ನನ್ನ ಅಂಗಡಿಯ ಹತ್ತಿರ ಬಂದೆವು. ನಾವು ಬಂದಾಗ ಗಿರೀಶ್ ಮತ್ತು ಸ್ವಾಮಿ ಕೆಳಗೆ ಬಿದ್ದಿದರು. ಆರೋಪಿ ಅಲ್ಲಿ ಇರಲಿಲ್ಲ, ಹೊರಟುಹೋಗಿದ್ದನು. ಸ್ವಾಮಿ ಎದ್ದರು, ಆದರೆ ಗಿರೀಶ್ ಎದ್ದೇಳಲಿಲ್ಲ. ನಾನು ಸ್ವಾಮಿಯನ್ನು ವಿಚಾರಿಸಿದಾಗ ಅರುಣ ರೀಪರ್ ನಲ್ಲಿ ತನಗೆ ಮತ್ತು ಗಿರೀಶ್ ಗೆ ಹೊಡೆದನು ಎಂದು ಹೇಳಿದನು. ನಾನು ಅಂಬ್ಯುಲೆನ್ಸ್ ಗೆ ಫೋನ್ ಮಾಡಿದೆ. ಅಂಬ್ಯುಲೆನ್ಸ್ ಬರುವುದು ತಡವಾಗುತ್ತದೆ ಎಂದು ಹೇಳಿದರು. ನಂತರ ನಾನು ಗಿರೀಶನ ತಂಗಿ ಚಾ.ಸಾ.**5** ಗಂಗಲಕ್ಷ್ಮಿಯನ್ನು ಹುಡುಕಿಕೊಂಡು ಮನೆಯ ಹತ್ತಿರ ಹೋದೆನು. ಮನೆಯಲ್ಲಿ ಗಂಗಲಕ್ಷ್ಮಿ ಇರಲಿಲ್ಲ. ನಂತರ ನಾನು ಗಿರೀಶನ ಮಾವ ಚಾ.ಸಾ.**7** ವೆಂಕಟೇಶಪ್ಪನ ಮನೆಗೆ ಹೋದೆನು. ವೆಂಕಟೇಶನಿಗೆ ಹೊಡೆದಾಟದ ವಿಷಯವನ್ನು ತಿಳಿಸಿದೆನು. ಆಗ ವೆಂಕಟೇಶಪ್ಪ ನಾನು ಬರುತ್ತೇನೆಂದು ಹೇಳಿದರು. ನಾನು ಅಂಗಡಿಯ ಹತ್ತಿರ ಹೋದೆನು, ವೆಂಕಟೇಶಪ್ಪ ಬರಲಿಲ್ಲ. ಗಿರೀಶ ಅಲ್ಲೇ ನೆಲದಲ್ಲಿ ಬಿದ್ದಿದ್ದನು. ಸ್ವಾಮಿ ಹೊರಟು ಹೋಗಿದ್ದನು. ನಾನು ಆಟೋವನ್ನು ತರಲು ಹೋದೆನು. ಆಗ ವೆಂಕಟೇಶಪ್ಪ ಬಂದು ಗಿರೀಶನನ್ನು ಅಂಬ್ಯುಲೆನ್ಸ್ ನಲ್ಲಿ ಹಾಕಿಕೊಂಡು ತುಮಕೂರಿಗೆ ಹೊಗುತ್ತೇನೆಂದು ಹೇಳಿದರು. ಅರ್ಧ ಗಂಟೆಯ ನಂತರ ವೆಂಕಟೇಶಪ್ಪ ನನಗೆ ಫೋನ್ ಮಾಡಿ ಗಿರೀಶ ಮೃತಪಟ್ಟನೆಂದು ಹೇಳಿದರು. ಚಾ.ಸಾ.**1** ಶಿವಸ್ವಾಮಿ ಮಾರನೆ ದಿನ ಬೆಳಿಗ್ಗೆ ಹೆಬ್ಬೂರಿನ ಬನ್ನಿಮರದ ಕಟ್ಟೆಯ ಬಸ್ ಸ್ಟಾಂಡಿನಲ್ಲಿ ಮಲಗಿದ್ದನು. ನಾನು ಶಿವಸ್ವಾಮಿಯನ್ನು ವಿಚಾರಿಸಿದಾಗ ಅರುಣ ಹೊಡೆದಿದ್ದರಿಂದ ನನ್ನ ತಲೆಗೆ ಏಟು ಬಿದ್ದಿದೆ ಎಂದು ಹೇಳಿದನು. ನಂತರ ಅಂಬ್ಯುಲೆನ್ಸ್ ನಲ್ಲಿ ನಾನು ಚಾ.ಸಾ.**1** ಶಿವಸ್ವಾಮಿಯನ್ನು ತುಮಕೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆನು.

**3.** ದಿ.**20.03.2023** ರಂದು ಅರುಣ ನನಗೆ ಫೋನ್ ಮಾಡಿದನು. ನೀನು ಎಲ್ಲಿದ್ದೀಯ ಎಂದು ಕೇಳಿದೆನು, ಕೆಲಸಕ್ಕೆ ಬಾ ಎಂದು ಕರೆದನು. ಕೆಲಸಕ್ಕೆ ಬರುವುದಿಲ್ಲ, ಕುಣಿಗಲ್ ನಲ್ಲಿ ಇದ್ದೇನೆ ಎಂದು ಹೇಳಿದನು. ರಾತ್ರಿ ಗಲಾಟೆಯಾಯಿತು, ರೀಪರ್ ನಿಂದ ಗಿರೀಶನಿಗೂ, ಸ್ವಾಮಿಗೂ ರಾತ್ರಿ ಹೊಡೆದಿರುತ್ತೇನೆಂದು ಹೇಳಿದನು. ಗಲಾಟೆಯ ದಿವಸ ನಾನು ಶಿವಸ್ವಾಮಿ ಮತ್ತು ಗಿರೀಶನನ್ನು ಪಾಲಿಶ್ ಕೆಲಸಕ್ಕೆ ಕಳುಹಿಸಿದ್ದೆನು. ಗಿರೀಶ ಮತ್ತು ಶಿವಸ್ವಾಮಿ ಮಧ್ಯಾಹ್ನಕ್ಕೆ ಬಂದಿದ್ದರು. ನಾನು ಗಿರೀಶ ಮತ್ತು ಶಿವಸ್ವಾಮಿಗೆ ಕೂಲಿ ಹಣ ಕೊಟ್ಟಿದ್ದೆನು. ಆ ದಿನ ಆರೋಪಿ ಅರುಣ ನಮ್ಮ ಅಂಗಡಿಯಲ್ಲೇ ಕೆಲಸ ಮಾಡುತ್ತಿದ್ದನು. ಮತ್ತು ಶಿವಸ್ವಾಮಿ ಕೂಲಿ ಹಣ ತೆಗೆದುಕೊಂಡು ಹೋದ ನಂತರ ನಾನು ಮನೆಗೆ ಹೋಗಿದ್ದೆನು.

ನನ್ನ ಅಂಗಡಿಗೆ ನಾನು ಬೀಗ ಹಾಕಿದ್ದೆನು. ಆ ಕೀಯನ್ನು ಪಕ್ಕದ ಅಂಗಡಿಯಲ್ಲಿ ಕೊಟ್ಟಿದ್ದೆನು. ಅರುಣ ನನಗೆ ಫೋನ್ ಮಾಡಿ ಅಂಗಡಿಯ ಕೀ ತೆಗೆದುಕೊಳ್ಳುತ್ತೇನೆಂದು ಹೇಳಿದನು. ಈ ಎಲ್ಲಾ ವಿಚಾರಗಳನ್ನು ಪೋಲೀಸರ ಬಳಿ ಹೇಳಿದ್ದೇನೆ.

4. ನಂತರ ದಿ.22.03.2023 ರಂದು ಪೋಲೀಸರು ವಿಸಿಯಲ್ಲಿ ಕಂಡುಬರುವ ಆರೋಪಿ ಅರುಣನನ್ನು ನಮ್ಮ ಅಂಗಡಿಗೆ ಕರೆದುಕೊಂಡು ಬಂದಿದ್ದರು. ಆರೋಪಿಯನ್ನು ಕರೆದುಕೊಂಡು ಬಂದು ಮಹಜರ್ ಮಾಡಿದರು. ಆ ಜಾಗವನ್ನು ಆರೋಪಿ ಅರುಣ ಕೃತ್ಯ ನಡೆದ ಸ್ಥಳ ಎಂದು ತೋರಿಸಿದನು. ಆ ದಿನ ಮಾಡಿದ ಮಹಜರನ್ನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಆ ಮಹಜರನ್ನು ನಿಶಾನೆ ಪಿ1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ1(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಲೀಸರು ಫೋಟೋ ತೆಗೆದರು. ಆ ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಶಾನೆ ಪಿ2 ಮತ್ತು 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ:**

ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ 231(2) ರಡಿಯಲ್ಲಿ ಹಾಕಿದ ಅರ್ಜಿಯಲ್ಲಿ ಮಾಡಿದ ಆದೇಶದಂತೆ ಚಾ.ಸಾ.1 ಮತ್ತು 2 ರವರ ಮುಖ್ಯ ವಿಚಾರಣೆಯಾದ ನಂತರ ಪಾಟೀ ಸವಾಲು ಮಾಡಲು ಪ್ರಕರಣವನ್ನು ಮುಂದೂಡಲಾಯಿತು.

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

ಸಾಕ್ಷಿಯನ್ನು ಪುನಃ ದಿ.04.10.2024 ರಂದು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ:**

5. ಅರುಣ ಅಲಿಯಾಸ್ ಅಣ್ಣಪ್ಪಸ್ವಾಮಿ ನಮ್ಮ ಅಂಗಡಿಗೆ ಬಂದು 3 ತಿಂಗಳಾಗಿತ್ತು. ಅರುಣ ಅಲಿಯಾಸ್ ಅಣ್ಣಪ್ಪಸ್ವಾಮಿಯವರ ಸ್ವಂತ ಊರು ನನಗೆ ಗೊತ್ತಿಲ್ಲ, ಗಿರೀಶರವರು ಕರೆದುಕೊಂಡು ಬಂದು ಕೆಲಸಕ್ಕೆ ಸೇರಿಸಿದ್ದರು. ಅರುಣ ಅಲಿಯಾಸ್ ಅಣ್ಣಪ್ಪ ಸ್ವಾಮಿ ಪೀಸ್ ವರ್ಕ್ ಮಾಡುತ್ತಿದ್ದರು. ಪೀಸ್ ವರ್ಕ್ ಇಲ್ಲದಿದ್ದರೆ ಹಣ ಕೊಡುತ್ತಿರಲಿಲ್ಲ ಎಂದರೆ ಕೆಲಸ ಇರುತ್ತಿತ್ತು ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದ ನಂತರ ನಮ್ಮ ಅಂಗಡಿಯಲ್ಲೇ ಮಲಗುತ್ತಿದ್ದನು, ಎಲ್ಲಿಯೂ ಹೋಗುತ್ತಿರಲಿಲ್ಲ. ಬನ್ನಿಮರದ ಕಟ್ಟೆಯಲ್ಲಿ ರಸ್ತೆ ಬದಿಯಲ್ಲಿ ಸುಮಾರು 50 ಮನೆಗಳಿವೆ. ಚಿಕ್ಕಣ್ಣಸ್ವಾಮಿ ದೇವಸ್ಥಾನ 2 ಕಿ ಮೀ ದೂರದಲ್ಲಿದೆ. ಹೆಬ್ಬೂರಿಗೆ 2-3 ಕಿ ಮೀ ದೂರ ಆಗುತ್ತದೆ. ಗಿರೀಶ ಕಮಲಾಪುರದವರು. ಶಿವಸ್ವಾಮಿ ನೆಲಮಂಗಲದವರು. ಬನ್ನಿಮರದ ಕಟ್ಟೆಯಲ್ಲಿ ಸುಮಾರು ವಾಹನಗಳು ಇವೆ. ನಮ್ಮ ಮನೆಯಲ್ಲಿ ದ್ವಿಚಕ್ರ ವಾಹನವಿದೆ.

6. ನಮ್ಮ ಅಂಗಡಿಯಿಂದ 2-3 ಮನೆಗಳ ನಂತರ ರೇಣುಕಾ ರವರ ಮನೆ ಇದೆ. ರೇಣುಕಾರವರ ಮನೆಯಲ್ಲಿ ಅವರ ತಂದೆ, ತಾಯಿ, ಹೆಂಡತಿ ಮತ್ತು ಮಗು ಇದ್ದಾರೆ. ನಮ್ಮ ಅಂಗಡಿಯ ಪಕ್ಕದಲ್ಲಿ ಸಾಸಲೇಗೌಡ, ಗಂಗಾಧರಯ್ಯ, ಮುನಿಸ್ವಾಮಿ ಯವರ ಮನೆಗಳು ಇವೆ. ಅವರ ಮನೆಗಳಲ್ಲಿ ಎಷ್ಟು ಜನ ಇದ್ದಾರೆಂದು ನಾನು ಲೆಕ್ಕ ಮಾಡಿಲ್ಲ. ನಮ್ಮ ಅಂಗಡಿಯ ಪಕ್ಕದಲ್ಲಿ ಟೀ ಹೋಟೆಲ್, ತಿಂಡಿ ಹೋಟೆಲ್, ಊಟದ ಹೋಟೆಲ್ ಮತ್ತು ಚಿಲ್ಲರೆ ಅಂಗಡಿಗಳು ಇವೆ. ರಾತ್ರಿ ಹೋಟೆಲ್ ಬಂದ್ ಆಗಿತ್ತು.

7. ನಾನು ಅಂಗಡಿಯ ಹತ್ತಿರ ರಾತ್ರಿ 11-11.30 ಗಂಟೆಗೆ ಬಂದೆನು. ಶಿವಸ್ವಾಮಿ ಮತ್ತು ಗಿರೀಶ ಅಂಗಡಿಯ ಮುಂದೆಯೇ ಬಿದ್ದಿದ್ದರು. ಶಿವಸ್ವಾಮಿಗೆ ಹಣೆಗೆ ಏಟಾಗಿತ್ತು. ಗಿರೀಶ ಮಾತನಾಡುತ್ತಿರಲಿಲ್ಲ. ಅಕ್ಕಪಕ್ಕದವರು ಇದ್ದರು, ಯಾರಿದ್ದರು ಎಂದು ನಾನು ಗಮನಿಸಲಿಲ್ಲ. ನಾನು ಸ್ವಾಮಿಯನ್ನು ವಿಚಾರಿಸಿದಾಗ ಅರುಣ ರೀಪರ್ ನಲ್ಲಿ ತನಗೆ ಮತ್ತು ಗಿರೀಶನಿಗೆ ಹೊಡೆದನೆಂದು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮರಗೆಲಸದ ಅಂಗಡಿಯಾಗಿದ್ದರಿಂದ ರೀಪರ್ ಪಟ್ಟಿಗಳು ಬಹಳಷ್ಟು ಇರುತ್ತವೆ. ತುಂಡಾಗಿದ್ದ ರೀಪರ್ ಪಟ್ಟಿಗಳು ಅಲ್ಲಲ್ಲಿ ಬಿದ್ದಿದ್ದವು. ರಕ್ತ ನೆಲದ ಮೇಲೆ ಬಿದ್ದಿತ್ತು. ಗಿರೀಶ ಮಲಗಿದ್ದಲ್ಲಿ ರಕ್ತ

ಬಿದ್ದಿತ್ತು. ಆಗ ಕತ್ತಲು ಇತ್ತು. 108 ಅಂಬ್ಯುಲೆನ್ಸ್ ಗೆ ಫೋನ್ ಮಾಡಿದೆ.

8. ರಾತ್ರಿ ತುಮಕೂರು-ಕುಣಿಗಲ್ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ. ಗಂಗಲಕ್ಷ್ಮಿ ಹೆಬ್ಬೂರಿನಲ್ಲಿದ್ದರು. ಅಲ್ಲಿಗೆ ಹೋಗಿದ್ದೆನು. ನಂತರ ನಾನು ವೆಂಕಟೇಶಪ್ಪನ ಮನೆಗೆ ಹೋದೆನು. ಅದು ಮರಾಠಿಪಾಳ್ಯದಲ್ಲಿದೆ. ರಾತ್ರಿ ವಾಪಸ್ ಅಂಗಡಿಗೆ ಬರುವಾಗ ಎಷ್ಟು ಹೊತ್ತಾಗಿತ್ತು ಎಂದು ನಾನು ನೋಡಲಿಲ್ಲ. ನಾನು ಮತ್ತು ನನ್ನ ಹೆಂಡತಿ ಒಟ್ಟಿಗೇ ಹೋಗಿದ್ದೆವು. ನಾನು ವಾಪಸ್ ಬಂದಾಗ ಶಿವಸ್ವಾಮಿ ಇರಲಿಲ್ಲ. ನಾನು ಆಟೋ ಹುಡುಕಿಕೊಂಡು ಹೋದೆನು, ಆಗ ವೆಂಕಟೇಶಪ್ಪ ಫೋನ್ ಮಾಡಿ ಗಿರೀಶನನ್ನು ಅಂಬ್ಯುಲೆನ್ಸ್ ನಲ್ಲಿ ಕರೆದುಕೊಂಡು ಹೋಗುತ್ತಿದ್ದೇನೆ ಎಂದು ಹೇಳಿದರು. ಗಿರೀಶ ತೀರಿಕೊಂಡ ಎಂದು ಗೊತ್ತಾದ ನಂತರ ನಾನು ಮನೆಗೆ ಹೋದೆನು. ಆಗ ರಾತ್ರಿ 1.00 ಗಂಟೆಯ ಮೇಲಾಗಿತ್ತು.

9. ಬೆಳಿಗ್ಗೆ 7.00 ಗಂಟೆಗೆ ಬನ್ನಿಮರದ ಕಟ್ಟೆಗೆ ಬಂದೆನು. ಅಲ್ಲಿ ಶಿವಸ್ವಾಮಿ ಬಸ್ ಸ್ಟಾಂಡಿನಲ್ಲಿ ಮಲಗಿದ್ದನು. ಶಿವಸ್ವಾಮಿಯನ್ನು ಅಂಬ್ಯುಲೆನ್ಸ್ ನಲ್ಲಿ ಕರೆದುಕೊಂಡು ಹೋದರು. ಜೊತೆಯಲ್ಲಿ ಯಾರು ಹೋದರು ಎಂದು ಗೊತ್ತಿಲ್ಲ. ನಾನು ವಾಪಸ್ ಮನೆಗೆ ಹೋದೆನು. ಆ ದಿನ ಸಾಯಂಕಾಲ 4.00 ಗಂಟೆಗೆ ಆಸ್ಪತ್ರೆಗೆ ಹೋದೆನು. ನಾನು ಶಿವಸ್ವಾಮಿಯನ್ನು ವಿಚಾರಿಸಿದಾಗ ಅರುಣ ಹೊಡೆದಿದ್ದರಿಂದ ನನ್ನ ತಲೆಗೆ ಏಟು ಬಿದ್ದಿದೆ ಎಂದು ಹೇಳಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ದಿ.19.03.2023 ರಂದು ರಾತ್ರಿ 11.00 ಗಂಟೆಗೆ ಚಾ.ಸಾ.2 ರೇಣುಕಾ ನನಗೆ ಫೋನ್ ಮಾಡಿ ನನ್ನ ಅಂಗಡಿಯಲ್ಲಿ ಗಲಾಟೆ ನಡೆಯುತ್ತಿದೆ, ಅರುಣ ಗಿರೀಶ್ ಮತ್ತು ಸ್ವಾಮಿಗೆ ಹೊಡೆಯುತ್ತಿದ್ದಾನೆ ಎಂದು ಹೇಳಿದರು, ನಾನು ಮತ್ತು ನನ್ನ ಹೆಂಡತಿ ಚಾ.ಸಾ.4 ಧನಲಕ್ಷ್ಮಿ ನನ್ನ ಅಂಗಡಿಯ ಹತ್ತಿರ ಬಂದೆವು, ನಾವು ಬಂದಾಗ ಗಿರೀಶ್ ಮತ್ತು ಸ್ವಾಮಿ ಕೆಳಗೆ ಬಿದ್ದಿದರು, ಆರೋಪಿ ಅಲ್ಲಿ ಇರಲಿಲ್ಲ, ಹೊರಟುಹೋಗಿದ್ದನು, ಸ್ವಾಮಿ ಎದ್ದರು, ಆದರೆ ಗಿರೀಶ್ ಎದ್ದೇಳಲಿಲ್ಲ, ನಾನು ಸ್ವಾಮಿಯನ್ನು ವಿಚಾರಿಸಿದಾಗ ಅರುಣ ರೀಪರ್ ನಲ್ಲಿ ತನಗೆ ಮತ್ತು ಗಿರೀಶ್ ಗೆ ಹೊಡೆದನು ಎಂದು ಹೇಳಿದನು, ನಾನು ಅಂಬ್ಯುಲೆನ್ಸ್ ಗೆ ಫೋನ್ ಮಾಡಿದೆ, ಅಂಬ್ಯುಲೆನ್ಸ್ ಬರುವುದು ತಡವಾಗುತ್ತದೆ ಎಂದು ಹೇಳಿದರು, ನಂತರ ನಾನು ಗಿರೀಶನ ತಂಗಿ ಚಾ.ಸಾ.5 ಗಂಗಲಕ್ಷ್ಮಿಯನ್ನು ಹುಡುಕಿಕೊಂಡು ಮನೆಯ ಹತ್ತಿರ ಹೋದೆನು, ಮನೆಯಲ್ಲಿ ಗಂಗಲಕ್ಷ್ಮಿ ಇರಲಿಲ್ಲ, ನಂತರ ನಾನು ಗಿರೀಶನ ಮಾವ ಚಾ.ಸಾ.7

ವೆಂಕಟೇಶಪ್ಪನ ಮನೆಗೆ ಹೋದೆನು, ವೆಂಕಟೇಶನಿಗೆ ಹೊಡೆದಾಟದ ವಿಷಯವನ್ನು ತಿಳಿಸಿದೆನು, ಆಗ ವೆಂಕಟೇಶಪ್ಪ ನಾನು ಬರುತ್ತೇನೆಂದು ಹೇಳಿದರು, ನಾನು ಅಂಗಡಿಯ ಹತ್ತಿರ ಹೋದೆನು, ವೆಂಕಟೇಶಪ್ಪ ಬರಲಿಲ್ಲ, ಗಿರೀಶ ಅಲ್ಲೇ ನೆಲದಲ್ಲಿ ಬಿದ್ದಿದ್ದನು, ಸ್ವಾಮಿ ಹೊರಟು ಹೋಗಿದ್ದನು, ನಾನು ಆಟೋವನ್ನು ತರಲು ಹೋದೆನು, ಆಗ ವೆಂಕಟೇಶಪ್ಪ ಬಂದು ಗಿರೀಶನನ್ನು ಅಂಬ್ಯುಲೆನ್ಸ್ ನಲ್ಲಿ ಹಾಕಿಕೊಂಡು ತುಮಕೂರಿಗೆ ಹೊಗುತ್ತೇನೆಂದು ಹೇಳಿದರು, ಅರ್ಧ ಗಂಟೆಯ ನಂತರ ವೆಂಕಟೇಶಪ್ಪ ನನಗೆ ಫೋನ್ ಮಾಡಿ ಗಿರೀಶ ಮೃತಪಟ್ಟನೆಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**11.** ಶಿವಸ್ವಾಮಿ ಹೇಳಿಕೆ ಕೊಡುವಾಗ ನಾನು ಆಸ್ಪತ್ರೆಯಲ್ಲಿ ಇರಲಿಲ್ಲ. ಪೋಲೀಸರು ನನಗೆ **22** ನೇ ತಾರೀಖಿಗೆ ಫೋನ್ ಮಾಡಿದರು. ನಾನು ಗಿರೀಶನನ್ನು ನೋಡಲು ಬಂದಿರಲಿಲ್ಲ. ದಿ.**20.03.2023** ರಂದು ಅರುಣ ನನಗೆ ಫೋನ್ ಮಾಡಿದನು, ನೀನು ಎಲ್ಲಿದ್ದೀಯ ಎಂದು ಕೇಳಿದೆನು, ಕೆಲಸಕ್ಕೆ ಬಾ ಎಂದು ಕರೆದೆನು, ಕೆಲಸಕ್ಕೆ ಬರುವುದಿಲ್ಲ, ಕುಣಿಗಲ್ ನಲ್ಲಿ ಇದ್ದೇನೆ ಎಂದು ಹೇಳಿದನು, ರಾತ್ರಿ ಗಲಾಟೆಯಾಯಿತು, ರೀಪರ್ ನಿಂದ ಗಿರೀಶನಿಗೂ, ಸ್ವಾಮಿಗೂ ರಾತ್ರಿ ಹೊಡೆದಿರುತ್ತೇನೆಂದು ಹೇಳಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ದೂರನ್ನು ಕೊಡಲು ಪ್ರಯತ್ನಿಸಿಲ್ಲ. ಗಲಾಟೆಯ ದಿವಸ ನಾನು ಶಿವಸ್ವಾಮಿ ಮತ್ತು ಗಿರೀಶನನ್ನು ಪಾಲಿಶ್ ಕೆಲಸಕ್ಕೆ ಕಳುಹಿಸಿದ್ದೆನು, ಗಿರೀಶ ಮತ್ತು ಶಿವಸ್ವಾಮಿ ಮಧ್ಯಾಹ್ನಕ್ಕೆ ಬಂದಿದ್ದರು, ನಾನು ಗಿರೀಶ ಮತ್ತು ಶಿವಸ್ವಾಮಿಗೆ ಕೂಲಿ ಹಣ ಕೊಟ್ಟಿದ್ದೆನು, ಆ ದಿನ ಆರೋಪಿ ಅರುಣ ನಮ್ಮ ಅಂಗಡಿಯಲ್ಲೇ ಕೆಲಸ ಮಾಡುತ್ತಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಸ್ವಾಮಿ ಕೂಲಿ ಹಣ ತೆಗೆದುಕೊಂಡು ಹೋದ ನಂತರ ನಾನು ಮನೆಗೆ ಹೋಗಿದ್ದೆನು, ನನ್ನ ಅಂಗಡಿಗೆ ನಾನು ಬೀಗ ಹಾಕಿದ್ದೆನು, ಆ ಕೀಯನ್ನು ಪಕ್ಕದ ಅಂಗಡಿಯಲ್ಲಿ ಕೊಟ್ಟಿದ್ದೆನು, ಅರುಣ ನನಗೆ ಫೋನ್ ಮಾಡಿ ಅಂಗಡಿಯ ಕೀ ತೆಗೆದುಕೊಳ್ಳುತ್ತೇನೆಂದು ಹೇಳಿದನು, ಈ ಎಲ್ಲಾ ವಿಚಾರಗಳನ್ನು ಪೋಲೀಸರ ಬಳಿ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಗಡಿಯ ಕೀ ಒಂದು ನನ್ನ ಬಳಿ ಅಥವಾ ಅರುಣನ ಬಳಿ ಇರುತ್ತಿತ್ತು. ಅಂಗಡಿಗೆ ಎರಡು ಕೀಗಳು ಇದ್ದವು. ಅರುಣನ ಬಳಿ ಕೀ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಣ್ಣಪ್ಪಸ್ವಾಮಿ ಗಿರೀಶನನ್ನು ರೀಪರ್ ನಿಂದ ಹೊಡೆದಿಲ್ಲ, ಅವನಿಗೂ ಈ ಕೊಲೆಗೂ ಯಾವುದೇ ಸಂಬಂಧ ಇಲ್ಲ, ನನ್ನ ಮೇಲೆ ಮತ್ತು ಶಿವಸ್ವಾಮಿ ಮೇಲೆ ಕೊಲೆ

ಆರೋಪ ಬರುತ್ತದೆ ಎಂದು ಅಣ್ಣಪ್ಪ ಸ್ವಾಮಿಯ ಮೇಲೆ ಸುಳ್ಳು ಕೊಲೆ ಆರೋಪ ಮಾಡಿದ್ದೇವೆ ಎಂದರೆ ಸರಿಯಲ್ಲ. ಗಿರೀಶ ಮತ್ತು ಶಿವಸ್ವಾಮಿಗೆ ಆ ದಿನಕೂಲಿ ಕೊಟ್ಟ ನಂತರ ಎಲ್ಲೆಲ್ಲಿಗೆ ಹೋಗಿದ್ದರೆಂದು ನನಗೆ ಗೊತ್ತಿಲ್ಲ. ಅವರಿಬ್ಬರೂ ಮದ್ಯಪಾನ ಮಾಡುತ್ತಿದ್ದರು.

**12.** ದಿ.**22.03.2023** ರಂದು ಪೋಲೀಸರು ಆರೋಪಿಯನ್ನು ಕರೆದುಕೊಂಡು ಬಂದಿಲ್ಲ, ಆ ದಿನ ಆರೋಪಿ ತೋರಿಸಿದ ಸ್ಥಳದಲ್ಲಿ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಾವೆಲ್ಲಾ ಸೇರಿ ಸುಳ್ಳು ಪ್ರಕರಣ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು